ತೊಂದರೆಗಳು ಬರುತ್ತವೆ. ೧೦ ವರ್ಷಗಳಲ್ಲಿ ಆಗಿರುವುದನ್ನು ನಾವು ಏನು ಮಾಡಲಿಕ್ಕೆ ಆಗುತ್ತದೆ. ಎಷ್ಟೋ ಅಧಿಕಾರಿಗಳು ಬಂದಿರುತ್ತಾರೆ, ಒಬ್ಬರೇ ಇರುವುದಿಲ್ಲ, ಒಬ್ಬ ಎಕ್ಸಿಕ್ಯೂಟೀವ್ ಇಂಜಿನೀಯರ್ ಇರುತ್ತಾನೆ, ಬೇರೆಯವನು ಬರುತ್ತಾರೆ, ಅದೇರೀತಿ ಅಸಿಸ್ಟೆಂಟ್ ಇಂಜಿನೀಯರು ಇರುತ್ತಾನೆ ಬೇರೆಯವನು ಬರುತ್ತಾನೆ. ಅವರು ಹೇಳುತ್ತಾರೆ ನಾನು ಚಾರ್ಜ್ ಕೊಡುವಾಗ ಎಲ್ಲಾ ಸರಿಯಾಗಿತ್ತೆಂದು ಈ ರೀತಿ ಒಬ್ಬರೂ ಸಿಕ್ಕಿಹಾಕಿಕೊಳ್ಳುವುದಿಲ್ಲ. ನಾವು ಇದನ್ನೆಲ್ಲಾ ಹುಡುಕುತ್ತಾ ಹೋದರೆ ಪರಿಹಾರ ಸಿಗುವುದಿಲ್ಲ, ನಾವು ಇನ್ನು ಮುಂದೆ ಈ ರೀತಿ ಆಗದಂತೆ, ಅಪಾಯಗಳು ಸಂಭವಿಸದಂತೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡೋಣ.

ಶ್ರೀ ಎಂ. ಚಂದ್ರಶೇಖರ್.—ಮುಂದೆ ಆಗುವ ಅನಾಹುತಗಳನ್ನು ತಪ್ಪಿಸಬೇಕಾದರೆ ಮುಂದೆ ಕಟ್ಟತಕ್ಕಂತಹ ಡ್ಯಾಮ್‌ಗಳಲ್ಲಿ ಇಂತಹ ಯಾವುದೇ ಕೆಲಸದಲ್ಲಿ ಆದಕ್ಷತೆಯಿಂದ ಇರುವ ಅಧಿಕಾರಿಗಳನ್ನು ನೇಮಿಸಬಾರದು. ಈಗ ಒಂದು ಅವಕಾಶ ಸಿಕ್ಕಿದೆ, ತನಿಖೆ ಮಾಡಿ ಸರಿಯಾದ ಕ್ರಮ ಕೈಗೊಳ್ಳಬೇಕು. ಈಗ ಭದ್ರಾ ಡ್ಯಾಮ್‌ನಲ್ಲಿ ಒಂದು ಕಡೆ ಸೋರುತ್ತಿಲ್ಲಾ ಎಲ್ಲಾ ಕಡೆ ಸೋರುತ್ತಿರುವುದರಿಂದ ಕಟ್ಟುವಾಗ ಯಾವುದೋ ದೋಷ ಇದೆ, ಅದನ್ನು ಕಂಡುಹಿಡಿದು ಆಗ ಇದ್ದ ಅಧಿಕಾರಿಯ ಮೇಲೆ ತನಿಖೆಯಾಗ ಬೇಕು. ಬೆಳೆಗಾರರಿಗೆ ಪರಿಹಾರ ಒದಗಿಸಿಕೊಡಬೇಕು. ಏಕೆಂದರೆ ೮ ತಿಂಗಳ ಕಾಲ ನೀರು ನಿಲ್ಲಿಸುವುದರಿಂದ ಒಂದು ವರ್ಷದ ಬೆಳೆ ನಷ್ಟವಾಗುತ್ತದೆ. ಕಾರ್ಮಿಕರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಏನು ಪರಿಹಾರ ಕೊಡಬೇಕು ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕು.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೆ, ನಾನು ಆಗಲೇ ಹೇಳಿದ್ದೇನೆ. ಶ್ರೀಮಾನ್ ಬಸಪ್ಪನವರು, ಇಂಜಿನಿಯರ್‌ಗಳು ಸರ್ಕಾರದ ಗಮನಕ್ಕೆ ಏತಕ್ಕೆ ತರಲಿಲ್ಲ ಎಂದು ಕೇಳಿದರು. ಇಂಜಿನಿಯರ್‌ಗಳು ೧೯೭೫, ೧೯೭೬ ಮತ್ತು ೧೯೭೭ರಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆಗ ಸರ್ಕಾರ ನಾನಾ ಕಾರಣಗಳಿಂದ ತೀರ್ಮಾನ ಕೈಗೊಳ್ಳಲಿಕ್ಕೆ ಸಾಧ್ಯವಾಗಿಲ್ಲ. ಈಗ ಅದನ್ನು ಮಾಡದೆ ವಿಧಿಯಿಲ್ಲ ಎಂದು ಬಂದಿರುವುದರಿಂದ ಅದನ್ನು ಮಾಡಲೇ ಬೇಕಾಗಿದೆ. ಹಿಂದೆ ಏತಕ್ಕೆ ಮಾಡಲಿಲ್ಲ ಎನ್ನುವುದನ್ನು ನೋಡಲಿಕ್ಕೆ ಹೋದರೆ ಹೆಚ್ಚಿನ ಲಾಭ ಇಲ್ಲ. ಹಿಂದೆ ಇಂಜಿನಿಯರ್‌ಗಳು ಸರ್ಕಾರದ ಗಮನಕ್ಕೆ ತಂದಾಗ ಸರ್ಕಾರ ಒಪ್ಪಿಲ್ಲ. ೧೯೭೮ರಲ್ಲಿ ಸರ್ಕಾರಕ್ಕೆ ಬಂದಾಗಲೂ ಒಪ್ಪಲಿಕ್ಕೆ ಆಗಿಲ್ಲ. ಅಂದರೆ ಜವಾಬ್ದಾರಿ ತಪ್ಪಿ ಹೋಯಿತು ಎಂದು ಅಲ್ಲ. ಆಗ ರಿಪೇರಿ ಮಾಡಿಸಲಿಕ್ಕೆ ಅಂತಹ ಒಂದು ದೊಡ್ಡ ಅಪಾಯ ಕಾಣದೇ ಇರಬಹುದು. ಈಗ ಅಪಾಯ ಮೈನ್ ಡ್ಯಾಮ್‌ನಲ್ಲಿ ಇಲ್ಲದಿದ್ದು ಸ್ಪೂಯಸ್‌ನಲ್ಲಿ ಲೀಕೇಜಸ್ ಕಂಡು ಬರುತ್ತಿದೆ. ಫ್ಲಡ್ ಜಾಸ್ತಿ ಬಂದಾಗ ಹೆಚ್ಚು ಅಪಾಯ ಆಗಬಹುದು ಎನ್ನುವ ದೃಷ್ಟಿಯಿಂದ, ಈಗಲೇ ಸರಿಮಾಡಿಕೊಂಡರೆ ಮುಂದೆ ಆಗತಕ್ಕ ಅಪಾಯವನ್ನು ತಪ್ಪಿಸಬಹುದು. ಅಷ್ಟೇ ಹೊರತು ಬೇರೆ ಇನ್ನು ಯಾವುದಕ್ಕೂ ಅಲ್ಲ.

೩೧ ನೇ ಪ್ರಕರಣದ ಮೇರೆಗಿನ ವಿಷಯ

ವಿಷಯ.—ದಿನಾಂಕ ೯ನೇ ಮಾರ್ಚಿ ೧೯೮೧ ರಂದು ಶೇಷಾದ್ರಿಪುರಂನ ಹತ್ತಿರ ಬೆಂಗಳೂರು ನಗರ ಸಾರಿಗೆ ಬಸ್ ಅಪಘಾತಕ್ಕೀಡಾದ ಬಗ್ಗೆ.

ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ) —ಅಧ್ಯಕ್ಷರೆ, ನಿಯಮ ೩೧ರ ಪ್ರಕಾರ ನನ್ನೆ ಬೆಂಗಳೂರು ನಗರದಲ್ಲಿ ನಡೆದಿರತಕ್ಕ ಬಿ.ಟಿ.ಎಸ್. ದುರ್ಘಟನೆಯನ್ನು ಸರ್ಕಾರದ ಗಮನಕ್ಕೆ ತರುತ್ತೇನೆ ೪೧(ಸಿ) ಬಸ್ಸು ನನ್ನೆ ಶೇಷಾದ್ರಿ ಪೊಲೀಸ್ ಸ್ಟೇಷನ್ ಎದುರುಗಡೆ ಹಾಲ್ಟ್‌ನಲ್ಲಿ ನಿಲ್ಲಬೇಕಾಗಿತ್ತು. ಹಿಂದಿನ ಹಾಲ್ಟ್‌ನಲ್ಲಿ ನಿಂತ ಬಸ್ಸು ಈ ಹಾಲ್ಟ್‌ನಲ್ಲಿ ನಿಲ್ಲಲಿಲ್ಲ. ಅದು ಅರ್ಧ ಮೈಲಿ ಮುಂದೆ ಹೋಗಿ, ಪ್ಲಾಟ್‌ಫಾರಂ ಮೇಲೆ ಹೋಗಿ ಎರಡು ಮೂರು ಕಾರುಗಳಿಗೆ, ಐದಾರು ಸ್ಕೂಟರ್‌ಗಳಿಗೆ, ಹಲವಾರು ಸೈಕಲ್ಲುಗಳಿಗೆ ಡ್ಯಾಮೇಜ್ ಮಾಡಿದ್ದು ಅಲ್ಲದೆ, ಅಲ್ಲಿ ಎರಡು ಸ್ಪಾಟ್ ಡೆತ್ ಆಗಿದೆ. ಹಲವಾರು ಜನ ಕೆ. ಸಿ. ಜನರಲ್ ಆಸ್ಪತ್ರೆಯಲ್ಲಿ, ಕೆಲವರು ಮೆಂಟಲ್ ಆಸ್ಪತ್ರೆಯಲ್ಲಿ ಸೇರಿದ್ದಾರೆ. ಈಗ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಗೊತ್ತಿಲ್ಲ. ನನಗೆ ಬಂದಿರುವ ವರದಿಯಂತೆ ನನ್ನೆ ನಡೆದ ಘಟನೆಯಲ್ಲಿ ಆಸ್ಪತ್ರೆಯಲ್ಲಿ ಮೃತರಾಗಿದ್ದಾರೆ. ಇದುವರೆಗೆ ಇದರಿಂದ ಸತ್ತಿರತಕ್ಕವರು ಆರು ಜನ ಎಂದು ತಿಳಿದು ಬಂದಿದೆ.

ಮಾನ್ಯ ಮಂತ್ರಿಗಳು ಇದರ ಬಗ್ಗೆ ವಿವರಿಸ್ಲೆ ಮಾಡಿ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇದನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಕಾರಣ ಇಷ್ಟೆ, ಬಿ.ಟಿ.ಎಸ್. ಬಸ್ಸು ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಮೇಲೆ ಯಾರಿಗೆ ಆಗಲಿ. ಯಾವುದೇ ಹತೋಟಿ ಇದ್ದ ಹಾಗೆ ಕಾಣಿಸಲಿಲ್ಲ. ಕಳೆದ ೩೦ನೇ ಅಕ್ಟೋಬರ್ ತಿಂಗಳಿನಲ್ಲಿ ಬಸವನಗುಡಿ ಬಳಿ ಟರ್ನಿಂಗ್‌ನಲ್ಲಿ ಡಬಲ್ ಡೆಕ್ಕರ್ ಬಸ್ಸು ಬಿದ್ದು ೮೫ ಮಕ್ಕಳಿಗೆ ತೀವ್ರ ಗಾಯಗೊಳಿಸಿದ್ದು ತಮ್ಮ ಮುಂದೆ ಇದೆ. ಇದು ಆದನಂತರ ಕಳೆದ ೯ನೇ ಡಿಸೆಂಬರ್‌ನಲ್ಲಿ ಹಾವೇರಿ ಬಳಿ ಬಸ್ ಆಕ್ಸಿಡೆಂಟ್ ಆಗಿ ಹಲವಾರು ಮಂದಿ ಸತ್ತಿದ್ದಾರೆ. ಇದಲ್ಲದೆ ಮಂಡ್ಯ ಬಳಿ ಇನ್ನೊಂದು ಡಿಕ್ಕಿ ಹೊಡೆದ ಪರಿಣಾಮ ನಾಲ್ಕಾರು ಜನ ಸತ್ತಿದ್ದಾರೆ ; ಹಲವಾರು ಜನರಿಗೆ ಗಾಯಗಳಾಗಿವೆ. ಇತ್ತೀಚೆಗೆ ಆಕ್ಸಿಡೆಂಟ್‌ಗಳ ಸಂಖ್ಯೆ ಜಾಸ್ತಿಯಾಗುತ್ತಿವೆ. ಈ ರೀತಿ ಆಗತಕ್ಕ ಆಕ್ಸಿಡೆಂಟ್‌ಗಳನ್ನು ಕಡಿಮೆ ಮಾಡಲಿಕ್ಕೆ ಏನು ಮಾಡುತ್ತೀರಾ ತಿಳಿಸಬೇಕು. ಗೂಳಿಗಳಿಗೆ ಲಂಗು ಲಗಾಮು ಏನೂ ಇರುವುದಿಲ್ಲ ಅವು ಮನಸ್ಸಿಗೆ ಬಂದಕಡೆ ಹೋಗುತ್ತವೆ. ನಿಮ್ಮ ಬಸ್ಸುಗಳ ಕತೆ ಆ ರೀತಿ ಆಗಿದೆ. ಇವೊತ್ತು ಫುಟ್‌ಪಾತ್, ಮೇಲೆ ಹೋಗುತ್ತವೆ, ಕೆರೆಯೊಳಗೆ ಇಳಿಯುತ್ತವೆ. ಏತಕ್ಕೆ ಈ ರೀತಿ ಆಗುತ್ತಿದೆ ಎಂದರೆ ಡಿಪಾರ್ಟ್‌ಮೆಂಟ್ ಮೇಲೆ ಸಂಪೂರ್ಣ ಹತೋಟಿಯನ್ನು ನಮ್ಮ ಮಾನ್ಯ ಮಂತ್ರಿಗಳು ಕಳೆದುಕೊಂಡಿದ್ದಾರೆ. ಇತ್ತೀಚೆಗೆ ಆಕ್ಸಿಡೆಂಟ್‌ಗಳು ಆಗುತ್ತಿರುವುದನ್ನು ನೋಡಿದರೆ ಹಿಂದೆಂದೂ ಆಗದಷ್ಟು ಆಕ್ಸಿಡೆಂಟ್‌ಗಳು ಆಗುತ್ತಿವೆ. ಸಾವು ನೋವುಗಳು ಜಾಸ್ತಿಯಾಗುತ್ತಿವೆ. ತಾವು ಅಧಿಕಾರಕ್ಕೆ ಬಂದಮೇಲೆ ಜಾಸ್ತಿಯಾಗುತ್ತಿವೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾತನಾಡಬೇಕು. ಇಲ್ಲದೇ ಹೋದರೆ ತಾವು ಹೇಳಬೇಕಾದ ವಿಚಾರದ ಮಹತ್ವ ಹೊರಟು ಹೋಗುತ್ತದೆ.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಬ್ರೇಕ್ ಇಲ್ಲದೇ ಇರುವ ಬಸ್ಸುಗಳು ಎಂದರೆ ಕಲಾಯಿ ಇಲ್ಲದೇ ಇರುವ ಪಾತ್ರೆಗಳು ಇದ್ದ ಹಾಗೆ. ಬಸ್ಸುಗಳಿಗೆ ಬ್ರೇಕ್ ಏತಕ್ಕೆ ಇರುವುದಿಲ್ಲ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಈ ಘಟನೆಗೆ ಸಂಬಂಧಪಟ್ಟಂತೆ ತಮ್ಮಲ್ಲಿ ಮಾಹಿತಿ ಏನಾದರೂ ಇದ್ದರೆ ತಿಳಿಸಿ.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಬಸ್ಸು ಹಿಂದಿನ ಸ್ಟಾಪ್‌ನಲ್ಲಿ ನಿಂತಿದೆ. ಅದೇ ಮುಂದಿನ ಸ್ಟಾಪ್‌ನಲ್ಲಿ ನಿಲ್ಲದೆ ಅರ್ಧ ಮೈಲಿ ಮುಂದೆ ಹೋಗಿ ಟರ್ನ್ ಮಾಡಿದ್ದಾನೆ. ನನಗೆ ತಿಳಿದಿರುವ ಮಾಹಿತಿ ಪ್ರಕಾರ ಹೇಳಬೇಕು ಎಂದರೆ ಇವರು ಯಾರನ್ನು ಅಪಾಯಿಂಟ್ ಮಾಡಿಕೊಂಡಿದ್ದಾರೆ ಎಂದರೆ ಎಲ್ಲಾ ಡಿಫೆಕ್ಟೀವ್ ರೆಕ್ರೂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಇವರು ಏನು ಮೆಕಾನಿಕಲ್ ಇಂಜಿನಿಯರ್ ಅಪಾಯಿಂಟ್ ಮಾಡಿಕೊಂಡಿದ್ದಾರೆ ಅವರಿಗೆ ಬಸ್ಸು ಎಲ್ಲಿದೆ, ಇಂಜಿನ್ ಎಲ್ಲಿದೆ, ಪಿಸ್ಟನ್ ಎಲ್ಲಿದೆ, ಸ್ಟೇರಿಂಗ್ ಎಲ್ಲಿದೆ ಗೊತ್ತಿಲ್ಲ. ಬೇಕಾದರೆ ಅವರನ್ನು ಕರೆದುಕೊಂಡು ಬಂದು ನೋಡಿ. ಇತ್ತೀಚೆಗೆ ಆಗಿರತಕ್ಕ ರೆಕ್ರೂಟ್‌ಮೆಂಟ್ ಹಣದ ವ್ಯಾಪಾರದ ಮೇಲೆ ಆಗಿದೆ.

ಅಧ್ಯಕ್ಷರು.—ಅಲ್ಲಿರುವವರಿಗೆ ಯಾರಿಗೂ ಗೊತ್ತಿಲ್ಲ ಎಂದು ತಮ್ಮ ಅರ್ಥ ಏನು ?

ಶ್ರೀ ಪಿ. ರಾಂದೇವ್.—ಇಂತಹವು ಕೆಲವು.

ಅಧ್ಯಕ್ಷರು.—ಮಾನ್ಯ ಸದಸ್ಯರು ನೆನ್ನೆ ನಡೆದ ಬಸ್ಸಿನ ಘಟನೆಯ ಬಗ್ಗೆ ೩೧೨ರ ಪ್ರಕಾರ ಪ್ರಸ್ತಾಪ ಮಾಡುತ್ತಿದ್ದೀರಿ. ಅದಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಒದಗಿಸಿದರೆ, ವಿಷಯದ ಗಂಭೀರತೆ ಬರುತ್ತದೆ. ಅವರಿಗೆ ಗೊತ್ತಿಲ್ಲದ ವಿಷಯವನ್ನು ಗಮನಕ್ಕೆ ತಂದರೆ ಒಳ್ಳೆಯದು.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಇದನ್ನು ಸರಿಪಡಿಸಲಿಕ್ಕೆ ಆಗುತ್ತದೆಯೇ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಬಸ್ಸು ಆಕ್ಸಿಡೆಂಟ್ ಆಗಿದೆ. ಅಲ್ಲಿ ಜನ ಸತ್ತಿದ್ದಾರೆ, ಆಸ್ಪತ್ರೆಯಲ್ಲಿ ಕೆಲವರು ಇದ್ದಾರೆ ಎಂದು ತಿಳಿಸಿದ್ದೀರಿ, ಅದೇ ರೀತಿ ಅದಕ್ಕೆ ಸಂಬಂಧಪಟ್ಟ ಹಾಗೆ ಮಾಹಿತಿ ಏನಿದೆ ಅದನ್ನು ತಿಳಿಸಿ.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ನೆನ್ನೆ ಆಗಿರತಕ್ಕ ಘಟನೆಯ ಬಗ್ಗೆ ನನಗೆ ತಿಳಿದ ಮಟ್ಟಿಗೆ, It is not due to brake failure...ಹಿಂದಿನ ಹಾಲ್ಟ್‌ನಲ್ಲಿ ಬಸ್ಸು ನಿಂತಿದೆ, ಮುಂದಿನ ಹಾಲ್ಟ್‌ನಲ್ಲಿ ಬ್ರೇಕ್ ಫೈಲ್ಯೂರ್ ಆಗಲಿಕ್ಕೆ ಸಾಧ್ಯವಿಲ್ಲ. ಹಿಂದೆ ಮಾನ್ಯ ಮಂತ್ರಿಗಳು ಡ್ರೈವರ್ ಪಾನಮತ್ತರಾಗಿದ್ದಾರೆ ಎಕ್ಸಾಮಿನ್ ಮಾಡಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ಈಗ ಡ್ರೈವರ್ ಎಕ್ಸಾಮಿನ್ ಮಾಡಿಸಿದ್ದಾರೆಯೇ ಎಂದು ಕೇಳಂತ್ತೇನೆ. It is a human error ; it is

not mechanical error or mechanical failure. ಅಧ್ಯಕ್ಷರೆ, ರೂಟ್ ನಂಬರ್ ೪೧(ಸಿ), ೧, ೪೪, ಬಗ್ಗೆ ರ್ಯಾಷ್ ಡ್ರೈವಿಂಗ್ ಎಂದು ಪತ್ರಿಕೆಗಳಲ್ಲಿ ಬಂದಿದೆ.

ಅಧ್ಯಕ್ಷರು.—ಈ ಬಸ್ಸು ನಿಲ್ಲಬೇಕಾದ ಜಾಗ ಯಾವುದು ?

ಶ್ರೀ ಜಿ. ರಾಂದೇವ್.—ದೇವಸ್ಥಾನದ ಹತ್ತಿರ. ಇವೊತ್ತು ಸುಲಭವಾಗಿ ಪ್ರಾಣಗಳನ್ನು ತೆಗೆಯಬಹುದು. ಆಕ್ಸಿಡೆಂಟ್‌ಗಳು ಇತ್ತೀಚೆಗೆ ವಿಪರೀತ ಆಗುತ್ತಿವೆ. ಆದುದರಿಂದ ಮಾನ್ಯ ಮಂತ್ರಿಗಳು ರಿಪೋರ್ಟ್ ಓದಿದ ಮೇಲೆ ನಾನು ಮಾತನಾಡಲಿಕ್ಕೆ ಅವಕಾಶ ಕೊಡಬೇಕು ಎಂದು ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

Sri M. M. J. Sadyojatha (Minister for Transport).—Sir, I wish to make the following Statement.

In the morning of 9-3-1981 a BTS bus dashed against three pedestrains and two cyclists near the junction of Subedar Chatram Road and South Park Road. It also dashed against a parked car and a scooter. One of the injured whose identity has since been established as Hari s/o Suryanarayan of Gokula, a mechanic in a garage near Bharat Talkies died on the spot due to crushing of the skull. The injured were shifted to the hospital. The bus finally came to a halt after hitting an electric pole and the compound fencing of a weigh bridge near platform Road.

A case in Cr. No. 136/81 has been registered in Seshadripuram Police Station u/s 279, 337 and 304(A) IPC. The matter is under investigation. One of the injured Munikrishna has been treated as an out-patient and another injured Mahadevaswamy has been admitted to the K.C. General Hospital with injury on the back and in the pelvic region. He is reported to be out of danger. Two other injured Srinivasa Shastry and Ashok have been shifted to the NIMHANS as they sustained head injuries. None of the passengers in the bus or the crew had sustained any injuries.

The driver of the bus has been arrested and released on bail.

The Inspector of Motor Vehicles has inspected the said bus and his report is awaited.

On receipt of the message of the accident, Senior Officers of the K.S.R.T.C. and Police rushed to the spot and rendered medical aid to the injured. The K.S R T.C. ambulance was used to take the injured to NIMHANS accompanied by the Medical Officer of the Karnataka State Road Transport Corporation.

Ex-gratia relief as under has been paid :

(1) Rs. 2,000 to the dependents of the deceased.

(2) Rs. 500 to each of the injured.

೩-೦೦ ಪಿ.ಎಂ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ನಮಗೆ ಬಂದಿರುವ ವರದಿ ಪ್ರಕಾರ ಬಸ್‌ನ ಬ್ರೇಕ್ ಫೇಲ್ ಆಗಿದೆಯೇ ಹೊರತು ಆ ಡ್ರೈವರ್ ಪಾನಮತ್ತನಾಗಿರಲಿಲ್ಲ. ಇನ್ನೂ ವರದಿ ಬರಬೇಕಾಗಿದೆ, ಅದು ಬಂದಾಗ ಸಭೆಯ ಮುಂದಿಡುತ್ತೇನೆ.

ಶ್ರೀ ಪಿ. ರಾಮದೇವ್.—ತಮ್ಮ ಹೇಳಿಕೆಯಲ್ಲೇ report is awaited ಎಂದು ಹೇಳಿದ್ದೀರಿ. ಅದು ಬಂದಿದ್ದರೆ ಆ ರಿಪೋರ್ಟ್ ಏನು ಬಂದಿದೆ ಎಂಬುದನ್ನು ಸಭೆಯ ಮುಂದೆ ಇಡಬಹುದಲ್ಲವೆ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ರಿಪೋರ್ಟ್ ಇನ್ನೂ ಬಂದಿಲ್ಲ.

ಶ್ರೀ ಪಿ. ರಾಮದೇವ್.—ವರ್ಕ್‌ಷಾಪ್‌ನಲ್ಲಿ ಈ ವೆಹಿಕಲ್ಸ್‌ನ್ನು ಚೆಕ್ ಮಾಡತಕ್ಕ ಮೆಕ್ಯಾನಿಕ್, ಚೀಫ್ ಮೆಕ್ಯಾನಿಕ್, ಚೀಫ್ ಇಂಜಿನಿಯರ್, ಇನ್ನೂ ಯಾರ್ಯಾರು ಇದ್ದಾರೆ ಅವರನ್ನೆಲ್ಲಾ ಏತಕ್ಕೆ ಅರೆಸ್ಟ್ ಮಾಡಲಿಲ್ಲ. ವೆಹಿಕಲ್ಸ್ ಮೇನ್‌ಟೀನ್ ಮಾಡುವ ಜವಾಬ್ದಾರಿ ಯಾರಿಗೆ ಸೇರಿದೆ ಅವರ ಮೇಲೆ ಏತಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ ? ಸ್ವಾಮಿ, ಈ ಆಕ್ಸಿಡೆಂಟ್‌ನಲ್ಲಿ ಸತ್ತಿರುವ ವ್ಯಕ್ತಿಯ ಮನೆಯವರಿಗೆ ೨೧೦೦ ರೂ. ಕೊಡುವುದಾಗಿ ತಿಳಿಸಿದ್ದೀರಿ. ಇದು ಏನೇನೂ ಸಾಕಾಗುವುದಿಲ್ಲ. ಆದ್ದರಿಂದ ದಯವಿಟ್ಟು ಈ ಪರಿಹಾರ ಧನವನ್ನು ೫೦೦೦ ರೂ.ಗಳಿಗೆ ಏರಿಸಬೇಕು.

(ಉತ್ತರವಿಲ್ಲ)

ಶ್ರೀ ಎಂ ಎಂ.ಜೆ.ಸದ್ಯೋಜಾತ.—ನನಗೆ ಬಂದಿರುವ ವರದಿಯ ಪ್ರಕಾರ ಪ್ರತಿಯೊಂದು ಬಸ್ ನ್ನೂ ಡಿಪೋದಿಂದ ಹೊರಗಡೆ ಬಿಡುವಾಗ ಚೆಕ್ ಮಾಡಿ ಬಿಡುತ್ತಾರೆ.

ಶ್ರೀ ಕೆ.ಎಚ್. ಶ್ರೀನಿವಾಸ್ —ಸ್ವಾಮಿ, ಈ ಸಿಟಿ ಬಸ್‌ನ ದುರವಸ್ಥೆಯನ್ನು ಸುಧಾರಿಸುವ ಬಗ್ಗೆ ಹಿಂದೆ ಅನೇಕ ಸಲಹೆಗಳು ಬಂದಿದ್ದರೂ ಇದುವರೆಗೂ ಯಾವ ಪ್ರಯೋಜನವೂ ಆಗಿಲ್ಲ. ಈಗ ಹೊಸ ಹೊಸ ಎಕ್ಸ್‌ಪೆರಿಮೆಂಟ್ಸ್‌ನ್ನು ಈ ಬಗ್ಗೆ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಸದ್ಯೋಜಾತಪ್ಪನವರು ಸಿಟಿ ಬಸ್‌ನ ಪ್ರಯಾಣ ಹೇಗಿರುತ್ತದೆಂಬುದನ್ನು ನೋಡಬೇಕಾದರೆ ಪ್ರತಿದಿವಸ ಒಂದು ಗಂಟೆ ಸಿಟಿ ಬಸ್‌ನಲ್ಲಿ ತಿರುಗಾಡುವುದಕ್ಕೆ ಪ್ರಾರಂಭಿಸಬೇಕು. ಆಗ ಈ ಪರಿಸ್ಥಿತಿ ಸುಧಾರಿಸ ಬಹುದು.

ಶ್ರೀ ಎಂ.ಎಂ.ಜೆ.ಸದ್ಯೋಜಾತ–ಆಗಲಿ ನೀವು ಹೇಳುವಂತೆ ಸಿಟಿ ಬಸ್‌ನಲ್ಲೇ ತಿರುಗಾಡಿ ನೋಡುವ ಪ್ರಯತ್ನ ಮಾಡೋಣ.

SRI C.M ARUMUGHAM.—Sir, in Karnataka people are afraid of travelling in K.S.R.T.C. buses because not a day passes without an accident. Therefore, my submission is why not we allot a day to discuss the working and functioning of the K.S.R.T.C. ? At present we have a seminor officer as the Chairman. But still it is not working efficiently and in the recent past many deaths have taken place due to inefficient administration. So, in order to streamline the whole administration this House should discuss the working of the K S.R.T.C.

MR. SPEAKER.—It is a good suggestion.

SRI M.C. BASAPPA.—As a matter of fact we have been telling that this House should discuss the working of P. S. C. Electricity Board and also the K.S.R.T.C.

MR. SPEAKER.—We shall fix up a date.

ಶ್ರೀ ಎಂ. ಚಂದ್ರಶೇಖರ್.— ಸ್ವಾಮಿ, ಕಳೆದಸಾರಿ ಅಧಿವೇಶನದಲ್ಲಿ, ಬಸ್ ಛಾರ್ಜ್ ಜಾಸ್ತಿ ಮಾಡಿದ್ದರ ಬಗ್ಗೆ ಪ್ರಸ್ತಾಪ ಮಾಡಿದಾಗ ಇದಕ್ಕೆ ಬೇರೆ ದಿವಸ ಕಾಲಾವಕಾಶ ತೆಗೆದುಕೊಂಡು ಛಾರ್ಜಸ್ ಜಾಸ್ತಿ ಮಾಡಲು ಕಾರಣ ಏನು ಎಂಬುದನ್ನು ಹೇಳುವುದಾಗಿ ಸಚಿವರು ಹೇಳಿದ್ದರು. ಆದರೆ ಹೇಳಲಿಲ್ಲ.

ಅಧ್ಯಕ್ಷರು.—ಈ ಬಗ್ಗೆ ಮಾತುಕತೆ ನಡೆಸಲು ನಗರದ ಶಾಸನಸಭಾ ಸದಸ್ಯರನ್ನು ಬರಮಾಡಿ ಕೊಂಡು ಮೀಟಿಂಗ್ ಮಾಡುವಂತೆ ಸಚಿವರಿಗೆ ತಿಳಿಸುತ್ತೇನೆ. ಆಗ ತಾವು ತಮ್ಮ ಸಲಹೆ ಕೊಡಿ. It is a very narrow road. I do not know whether the busses are allowed to run in that particular road. We shall take up the next business.

LEGISLATIVE BUSINESS

The Cotton Ginning and Pressing Factories (Karnataka Amendment) Bill, 1981.

Motion to Consider

MR. SPEAKER.—Hon'ble Chief Minister to move the Cotton Ginning and Pressing Factories (Karnataka Amendment) Bill, 1981 for consideration.

SRI R. GUNDU RAO (Chief Minister).—Sir, I move,

"That the Cotton Ginning and Pressing Factories (Karnataka Amendment) Bill, 1981 be taken into consideration.

The question was proposed.

ಶ್ರೀ ಆರ್ ಗುಂಡೂರಾವ್.—ಮಾನ್ಯ ಸಭಾಧ್ಯಕ್ಷರೆ, ನಾನು ಈಗ ಸಭೆಯ ಮುಂದೆ ತಂದಿರುವ ತಿದ್ದುಪಡಿ ಮಸೂದೆ ಬಹಳ ಸಣ್ಣದು. ಕಾಟನ್ ರೇಟನ್ನು ಫಿಕ್ಸ್ ಮಾಡಬೇಕಾದರೆ ಮಾರ್ಕೆಟಿಂಗ್ ಕಮಿಟಿಗೆ ಕಾಟನ್ ಗ್ರೊಯರ್ಸ್ ಪೈಕಿ ಸದಸ್ಯರನ್ನು ಚುನಾವಣೆ ಮಾಡಬೇಕು. ಅದನ್ನು ಕಾನೂನು ಪ್ರಕಾರವೇ ಮಾಡಬೇಕಾಗುತ್ತದೆ. ಆದರೆ ಈ ಚುನಾವಣೆ ಮಾಡುವುದು ಬಹಳ ತಡವಾಗುವುದರಿಂದ ಕಾಟನ್‌ಗೆ ರೇಟನ್ನು ಫಿಕ್ಸ್ ಮಾಡದಿದ್ದರೆ ಈ ಬೆಳೆಗಾರರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ಗಮನಿಸಿ ಕಾಟನ್ ಬೆಳೆಯುವವರಿಗೆ ಒಳ್ಳೆಯ ರೇಟ್ ಸಿಕ್ಕುವಂತೆ ಮಾಡುವ ಸಲುವಾಗಿ ಸಮಿತಿಗೆ ಸದಸ್ಯರನ್ನು ನಾಮಿನೇಷನ್ ಮಾಡುವ ಬಗ್ಗೆ ಆಯಾಯಾ ಜಿಲ್ಲಾಧಿಕಾರಿಯವರಿಗೇ ಅಧಿಕಾರವನ್ನು ಕೊಡಬೇಕೆಂದು ಈ ತಿದ್ದುಪಡಿಯನ್ನು ತಂದಿದ್ದೇನೆ. ಮಾನ್ಯ ಸಭೆಯು ಇದಕ್ಕೆ ಯಾವ ವಿರೋಧವನ್ನೂ ವ್ಯಕ್ತಮಾಡದೆ ಸರ್ವಾನುಮತದಿಂದ ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸಭಾಧ್ಯಕ್ಷರೇ ಈ ಬಿಲ್ ಬಗ್ಗೆ ಸರ್ಕಾರದ ಉದ್ದೇಶ ಏನಿದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಇಲ್ಲಿನ ತಿದ್ದುಪಡಿಯು ಪ್ರಕಾರ ಒಂದು ವರ್ಷದಲ್ಲಿ ಎಂದು ಏನೂ ಇಲ್ಲ. ಎಲ್ಲಾ ಕಾಲದಲ್ಲೂ ಜಿಲ್ಲಾಧಿಕಾರಿಯವರೇ ನಾಮಿನೇಷನ್ ಮಾಡುವ ಅವಕಾಶ ಇದರಲ್ಲಿ ಇದೆ. ಪ್ರಿಸ್ಕ್ರೈಬ್ಡ್ ಟೈಮ್‌ನಲ್ಲಿ ಎಲೆಕ್ಷನ್ ಆಗಿಲ್ಲ. ಪ್ರಿಸ್ಕ್ರೈಬ್ಡ್ ಟೈಮ್ ಯಾವುದು ಯಾವಾಗ ಗೊತ್ತುಮಾಡಿದ್ದಿರೋ ಇಲ್ಲವೋ ಎನ್ನುವುದು ಯಾವುದೂ ಗೊತ್ತಾಗುತ್ತಿಲ್ಲ,

MR. SPEAKER.—Whether there are rules existing for the election within which election will have to take place ? ಮಾನ್ಯ ವಿರೋಧಪಕ್ಷದ ನಾಯಕರು ಎಲೆಕ್ಷನ್ ರೂಲ್ಸ್ ಇದೆಯೇ ಹೇಗೆ ಎಂದು ಕೇಳುತ್ತಿದ್ದಾರೆ.